# ಈಶಾವಾಸ್ಯಮಿದಂ ಸರ್ವಮ್

◆ ಸ್ವಾಮಿ ಹೃದಾನಂದ

ಈಶೋಪನಿಷತ್ತಿನ ಪ್ರಥಮ ಮಂತ್ರ ಹೀಗಿದೆ:

**ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।**
**ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ಧನಮ್ ॥**

*ಈಶನಿಂದ ಈ ಜಗತ್ತನ್ನು ವ್ಯಾಪ್ತವಾಗಿಸಬೇಕು. ಆ ತ್ಯಾಗದಿಂದ ಭೋಗಿಸು. ಯಾರ ಧನವನ್ನೂ ಬಯಸಬೇಡ.*

**ಈಶಾವಾಸ್ಯಮಿದಮ್** ಎಂಬ ಮಾತನ್ನು ಕೇಳಿದ ತಕ್ಷಣ ನಮ್ಮಲ್ಲಿ ಮೂಡುವ ವಿಚಾರವೇನೆಂದರೆ, ಕಾಲಿಲ್ಲದ, ಕೈ ಇಲ್ಲದ, ಯಾವುದೇ ರೂಪ ಇಲ್ಲದ ಭಗವಂತ ಮೇಲೆ, ಕೆಳಗೆ, ಸುತ್ತಮುತ್ತ, ಎಲ್ಲ ಕಡೆಯೂ ವ್ಯಾಪಿಸಿರುವುದನ್ನು ಭಾವಿಸಬೇಕು ಎಂಬುದು. ಮನಸ್ಸಿನಲ್ಲಿ ಗೋಚರವಾಗಬಹುದಾದ ಭಾವನೆ ಏನೆಂದರೆ ಶುಭ್ರಜ್ಯೋತಿಯಂತೆ ದಶದಿಕ್ಕುಗಳಲ್ಲೂ ತುಂಬಿ ತುಳುಕಾಡುತ್ತಿರುವ ಅದನ್ನು ಬಿಟ್ಟು ಬೇರೆ ಏನೂ ಇಲ್ಲದ ಸ್ಥಿತಿ. ವೇದಾಂತಿಯು ಮೊಟ್ಟಮೊದಲು ಕಲಿಯುವ ಶಬ್ದಗಳಿವು—**ಈಶಾವಾಸ್ಯಮಿದಂ ಸರ್ವಮ್**. ಇವು ಭಗವಂತನ ಸರ್ವವ್ಯಾಪಕತೆಯ ಬಗ್ಗೆ ವೇದಾಂತದಲ್ಲಿ ಮತ್ತೆ ಮತ್ತೆ ಕೇಳಿ ಬರುತ್ತವೆ. ಈ ಪುನರುಕ್ತಿಯು ನಮ್ಮ ಮನಸ್ಸಿನ ಮೇಲೆ ನಿರ್ದಿಷ್ಟವಾಗಿ ಮೂಡಿಸುವುದೇನೆಂದರೆ, 'ಭಗವಂತ' ಎನ್ನುವವನು ಇದ್ದಾನೆ, ಅವನನ್ನು ಸರ್ವ ಚರಾಚರ ವಸ್ತುಗಳಲ್ಲಿ ಕಾಣಬೇಕು. ಯಾರು ಆ ಭಗವಂತ? ಯಾಕೆ ಆತನನ್ನು ಎಲ್ಲದರಲ್ಲೂ ಕಾಣಬೇಕು?

"ಜೀವನ ಕೆಟ್ಟದ್ದರಿಂದ ತುಂಬಿದೆ. ಅನುಭವಸ್ಥನಾದ ಯಾವ ಮನುಷ್ಯನೂ ಇದನ್ನು ನಿರಾಕರಿಸುವುದಕ್ಕೆ ಸಾಧ್ಯವಿಲ್ಲ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಎಲ್ಲೆಡೆ ಭಗವಂತನೇ ಇರುವುದಾದರೆ ಕೆಟ್ಟದ್ದು ಎಲ್ಲಿಂದ ಬಂತು? ಕಷ್ಟನಷ್ಟಗಳೇ ಇಲ್ಲವೆಂದು ಕಂಡೂಕಾಣದವರಂತೆ ನಾವು ಬಾಳಬೇಕೆ? ಜೀವನದ ಪ್ರತಿಯೊಂದು ಕ್ಷಣವೂ ನಾವು ಅನುಭವವನ್ನು ಪಡೆಯುತ್ತಿದ್ದೇವೆ. ಸುಖ, ದುಃಖ; ಲಾಭ, ನಷ್ಟ; ಮಾನ, ಅಪಮಾನ; ಶೀತ, ಉಷ್ಣ, ಇವುಗಳ ಸುರಿಮಳೆಯಲ್ಲಿ ಸಾಕಷ್ಟು ಬೆಂದು, ನೊಂದ ಮೇಲೆ ಮನುಷ್ಯ ಹೇಳುವ ಉಕ್ತಿ ಇದೇ—"ಈ ಜಗತ್ತನ್ನು ನಂಬಿ ಸುಖವಿಲ್ಲ, ಹೇ ದೇವ! ಪಾರುಮಾಡು." ಇಂದ್ರಿಯ ಸಾಮ್ರಾಜ್ಯದಲ್ಲಿ ಸುಖವಿಲ್ಲ, ಶಾಂತಿಯಿಲ್ಲ; ಇಂದ್ರಿಯಾತೀತ ಸಾಮ್ರಾಜ್ಯದಲ್ಲಿ ಪೂರ್ಣ ಸ್ವಾತಂತ್ರ್ಯದಿಂದ ದೊರೆಯುವ ನಿತ್ಯಾನಂದ ಇದೆ. ರೂಪ, ಗುಣ ಲಕ್ಷಣಗಳಿಂದ ಕೂಡಿದ ಇಂದ್ರಿಯ ಲೋಕಕ್ಕಿಂತ ಬೇರೆಯಾಗಿರುವ ಸತ್ಯವನ್ನು ವೇದೋಪನಿಷತ್ತುಗಳು ಸಾರಿ ಹೇಳುತ್ತವೆ. ಯಾವ ರೂಪವೂ ಇಲ್ಲದ, ಯಾವ ಗುಣವೂ ಇಲ್ಲದ, ನಿತ್ಯಾನಂದ ಸ್ವರೂಪಿಯಾದ ಚೈತನ್ಯವೇ ಸರ್ವತ್ರ ವಿದ್ಯಮಾನವಾಗಿದೆ. ಅದು ಸರ್ವವ್ಯಾಪಿ, ಆ ಚೈತನ್ಯವೇ ಈಶ ಅಥವಾ ಆಳುವವನು, ಒಡೆಯ, ಭಗವಂತ.

ಸರ್ವಪ್ರಕಾರದ ದುಃಖಗಳಿಂದ ಮುಕ್ತಿ ಬೇಕಾದರೆ ಸತ್ಯದ ಅರಿವು ಬೇಕು. ಶಾಶ್ವತ ಸತ್ಯವನ್ನು ವೇದಾಂತ, ಅಂದರೆ ವೇದಗಳ ಕೊನೆಯ ಭಾಗದಲ್ಲಿ ಬರುವಂತಹ ಉಪನಿಷತ್ತುಗಳು ಬೋಧಿಸುತ್ತವೆ. ಅವುಗಳಲ್ಲಿ ಪರಂಪರಾಗತವಾಗಿ ಮೊಟ್ಟ ಮೊದಲು ಅಧ್ಯಯನ ಮಾಡುವ ಉಪನಿಷತ್ತು ಅಂದರೆ **ಈಶಾವಾಸ್ಯೋಪನಿಷತ್**. ಹದಿನೆಂಟೇ ಶ್ಲೋಕಗಳುಳ್ಳ ಈ ಉಪನಿಷತ್ತು ಅತಿ ಚಿಕ್ಕದಾದರೂ, ಇದರ ಕೀರ್ತಿ ಅಪಾರವಾದದು. ಏಕೆಂದರೆ ಇಡೀ ವೇದಾಂತದ ಸಾರ ಇದರಲ್ಲಿದೆ. ಈ ಉಪನಿಷತ್ತು ತನ್ನ ಪ್ರಾರಂಭದ ಮೂರೇ ಶಬ್ದಗಳಲ್ಲಿ ಮನುಷ್ಯನ ಎಲ್ಲಾ ಸಮಸ್ಯೆಗಳಿಗೂ ಸಮಾಧಾನ ಸೂಚಿಸುತ್ತದೆ. ಸ್ಪಷ್ಟವಾದ ಮಾತುಗಳ ಮೂಲಕ ಅದು ಹೇಳುತ್ತದೆ— "ಮನುಷ್ಯನೇ! ನಿನಗೆ ನಿಜವಾದ ಆನಂದ ಬೇಕೋ? ನಿನ್ನ ಎಲ್ಲಾ ದುಃಖ ಹೋಗಬೇಕೇ? ಹಾಗಾದರೆ ನೀನೇನೂ ಮಾಡಬೇಕಾಗಿಲ್ಲ, ಕೇವಲ ನಿನ್ನ ದೃಷ್ಟಿಯನ್ನು ಬದಲಾಯಿಸು. ಇಡೀ ವಿಶ್ವವನ್ನು ನೋಡು, ಅನುಭವಿಸು, ಆದರೆ ಈಗಿನ ದೃಷ್ಟಿಯಿಂದಲ್ಲ. ನೋಡುತ್ತಿರುವ ನಿನ್ನ ಕಣ್ಣುಗಳಲ್ಲಿ ಭಗವತ್ ದೃಷ್ಟಿಯನ್ನು ತುಂಬು, ಏನೇನು ಕಣ್ಣಿಗೆ ಗೋಚರವಾಗುತ್ತಿದೆಯೋ, ಏನೇನು ಅನುಭವಕ್ಕೆ ಬರುತ್ತಿದೆಯೋ ಅದರಲ್ಲೆಲ್ಲಾ ಈಶ್ವರನನ್ನು ತುಂಬು. ಆಗ ನೀನು ಎಲ್ಲಾ ದುಃಖಗಳಿಂದ ಪಾರಾಗುವೆ." ಏನು ಇದರ ಅರ್ಥ? ಈಗ ನಮಗೆ ಜಗತ್ತು ಹೇಗೆ ಕಾಣುತ್ತಿದೆಯೋ ಅದನ್ನು ತ್ಯಜಿಸಿ ಜಗತ್ತು ಹೇಗೆ ನಿಜವಾಗಿಯೂ ಇದೆಯೋ ಅದನ್ನು ಕಾಣುವುದು—ಗೋಚರಿಸುವ ಜಗತ್ತಿನ ಹಿಂದಿರುವ ವಾಸ್ತವವನ್ನು ಗುರುತಿಸುವುದು. ಅವತಾರಪುರುಷರಾದ ಶ್ರೀರಾಮ ಕೃಷ್ಣರು ತಮ್ಮ ಜೀವನದಲ್ಲಿ ಇದನ್ನೇ ಸಾಧಿಸಿ ತೋರಿಸಿದ್ದಾರೆ.



ಬೆಂಗಳೂರಿನ ಬಳಿಯ ಶಿವನಹಳ್ಳಿಯಲ್ಲಿನ ರಾಮಕೃಷ್ಣ ಮಿಷನ್ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಲೇಖಕರು ಈಶಾವಾಸ್ಯ ಉಪನಿಷತ್ತಿನ ವಿಚಾರಗಳನ್ನು ಸರಳವಾಗಿ ವಿವರಿಸಿದ್ದಾರೆ.

ಅಣ್ಣ ರಾಮಕುಮಾರ ಬಾಲಕ ಗದಾಧರನು ಪೌರೋಹಿತ್ಯ ಕಲಿತು ಸಂಪಾದನೆ ಮಾಡಲಿ ಎಂದು ಕಲ್ಕತ್ತೆಗೆ ಕರೆದು ತಂದ. ಆದರೆ ಗದಾಧರ ಅದರಲ್ಲಿ ಯಾವ ಆಸಕ್ತಿಯನ್ನೂ ತೋರಿಸದೆ, "ಅಕ್ಕಿ, ಬಾಳೆಕಾಯಿ ಗಂಟು ಹಾಕುವ ವಿದ್ಯೆ ನನಗೆ ಬೇಕಿಲ್ಲ. ಯಾವ ವಿದ್ಯೆಯಿಂದ ಆತ್ಮಶಾಂತಿ ಸಿಗುತ್ತದೆಯೋ ಅದನ್ನೇ ನಾನು ಕಲಿಯುತ್ತೇನೆ" ಎಂದು ಹೇಳಿದ. ಕಾಣುತ್ತಿರುವ ಪ್ರಪಂಚದಲ್ಲಿ ಯಾವ ಸುಖವೂ ಇಲ್ಲ. ಕಾಮ-ಕಾಂಚನಗಳ ಹಿಂದೆ ಓಡುತ್ತಿರುವ ಜನಸಮೂಹದಲ್ಲಿ ಯಾರೂ ನಿಜವಾದ ಸುಖ ಪಡೆಯಲಾರರು ಎಂದು ವಿವೇಚಿಸಿ ಈ ಜಗತ್ತನ್ನು ತ್ಯಜಿಸಿ ನಿಜವಾದ ಆನಂದ, ಶಾಂತಿಯನ್ನು ಅರಸಿದರು. ಅವರು ಬೇರೆಲ್ಲಿಗೂ ಹೋಗಲಿಲ್ಲ. ದಕ್ಷಿಣೇಶ್ವರದಲ್ಲೇ ಇದ್ದು ಪ್ರಾಪಂಚಿಕ ದೃಷ್ಟಿಯನ್ನು ಬಿಟ್ಟು, ಭಗವಂತನನ್ನು ಹುಡುಕತೊಡಗಿದರು.

ಸಾಮಾನ್ಯವಾಗಿ ಮಾನವನು ಈ ಜಗತ್ತಿನಲ್ಲಿ ಮೂರು ವಸ್ತುಗಳನ್ನು ಆನಂದದಾಯಕವಾಗಿ ಕಾಣುವನು. ಅದೇ ಕಾಮ, ಕಾಂಚನ ಮತ್ತು ಕೀರ್ತಿ. ಇವೇ ಸುಖದ ಮೂಲ ಅನ್ನುವ ದೃಷ್ಟಿ ಇಟ್ಟುಕೊಂಡು ಅವುಗಳನ್ನು ಪಡೆಯುವುದಕ್ಕಾಗಿ ಹಂಬಲಿಸುತ್ತಾನೆ. ಶ್ರೀರಾಮಕೃಷ್ಣರು ಈ ದೃಷ್ಟಿಯನ್ನು ತ್ಯಜಿಸಿದರು. ಒಂದಾದ ಮೇಲೆ ಒಂದರಂತೆ ಸಾಧನೆ ಮಾಡತೊಡಗಿದರು. ಅದರ ಫಲವಾಗಿ ಅವರಿಗೆ ಈಶ್ವರ ಸಾಕ್ಷಾತ್ಕಾರವಾಯಿತು, ದೇವರನ್ನು ತಮ್ಮಲ್ಲಿಯೇ ಕಂಡರು. ತಮ್ಮ ಹೊರಗೆ ಕೂಡ ಕಂಡರು. ನೋಡುವ ದೃಷ್ಟಿ ಬದಲಾಯಿತು, ತೋರುವ ಪ್ರಪಂಚ ಮರೆಯಾಯಿತು. **ಈಶಾವಾಸ್ಯಮಿದಮ್** ಎನ್ನುವ ಮಾತು ಅಕ್ಷರಶಃ ಸತ್ಯವಾಯಿತು. ಅವರ ಕಣ್ಣಿಗೆ ಎಲ್ಲವೂ ಬ್ರಹ್ಮಚೈತನ್ಯಮಯವೇ. ಯಾವ ಯಾವ ಕಡೆಗೆ, ಎಲ್ಲಿ ಎಲ್ಲಿ ಮನಸ್ಸು ಹೋಗುತ್ತದೆಯೋ, ಕಣ್ಣು ಹೋಗುತ್ತದೆಯೋ ಅಲ್ಲೆಲ್ಲಾ ದೇವರ ದರ್ಶನ. ಅವರು ಹೇಳುತ್ತಿದ್ದರು: "ನನ್ನ ಜಗನ್ಮಯಿ ಅನೇಕದಂತೆ ತೋರುತ್ತಿರುವುದರ ಏಕ. ಅನಂತ ಶಕ್ತಿಯಿಂದ ಅವಳೇ ಹಲವು ವಿಧವಾಗಿ ತೋರುವ ಭೌತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳಾಗಿ ಜೀವ ಮತ್ತು ಜಗತ್ತೆಂಬ ಭೇದವನ್ನು ಧರಿಸುವಳು. ನನ್ನ ಜಗನ್ಮಯಿ ವೇದಾಂತಿಗಳ ಬ್ರಹ್ಮವಲ್ಲದೆ ಬೇರೆಯಲ್ಲ. ಅವಳೇ ನಿರಾಕಾರ ಬ್ರಹ್ಮನ ಸಾಕಾರ ಸ್ವರೂಪ."

ಸರ್ವವ್ಯಾಪಿಯಾದ ಭಗವಂತನ ಸ್ವರೂಪವನ್ನು ಈಶೋಪನಿಷತ್ ಹೀಗೆ ವರ್ಣಿಸುತ್ತದೆ:

**ಸ ಪರ್ಯಗಾತ್ ಶುಕ್ರಮಕಾಯಮವ್ರಣಮ್**
**ಅಸ್ನಾವಿರಗ್ಂ ಶುದ್ಧಮಪಾಪವಿದ್ಧಮ್ ।**
**ಕವಿರ್ಮನೀಷೀ ಪರಿಭೂಃ ಸ್ವಯಂಭೂಃ**
**ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ॥**
(ಈಶಾವಾಸ್ಯೋಪನಿಷತ್–೮)

*ಅವನು ಸರ್ವವ್ಯಾಪಿ, ಶುಭ್ರ, ಅಶರೀರಿ, ಕುಂದುಗಳಿಲ್ಲದವನು, ನರಗಳಿಲ್ಲದವನು, ಶುದ್ಧನು, ಪಾಪದ ಲೇಪವಿಲ್ಲದವನು, ಜ್ಞಾನಿ, ವಿಶೇಷ ಬುದ್ಧಿಯುಳ್ಳವನು, ಸರ್ವೋತ್ತಮ, ಸ್ವಯಂಭೂ, ಶಾಶ್ವತವಾಗಿರುವ ವಸ್ತುಗಳಿಗೆ ಅವುಗಳ ಕರ್ತವ್ಯವನ್ನು ಸರಿಯಾಗಿ ಹಂಚಿರುವನು.*

**ತ್ಯಾಗದಿಂದ ಸುಖಿಸು; ಯಾವುದನ್ನೂ ಬಯಸಬೇಡ** : ಎಲ್ಲದರಲ್ಲೂ ಎಲ್ಲರಲ್ಲೂ ಭಗವಂತನನ್ನು ಕಾಣು. ಯಾರನ್ನೂ ತ್ಯಜಿಸಬೇಕಾಗಿಲ್ಲ. ಮಕ್ಕಳು, ಸಂಸಾರ ಎಲ್ಲಾ ಇರಲಿ; ಐಶ್ವರ್ಯ ಇರಲಿ. ಆದರೆ ಅವೆಲ್ಲದರಲ್ಲಿ ಭಗವಂತನನ್ನು ತುಂಬಬೇಕು. ಆತನೇ ಹೆಂಡತಿಯಲ್ಲಿದ್ದಾನೆ. ಆತನೇ ಗಂಡನಲ್ಲಿದ್ದಾನೆ, ಆತನೇ ಮಕ್ಕಳಲ್ಲಿದ್ದಾನೆ, ಆತನೇ ಅಕ್ಕಪಕ್ಕದಲ್ಲಿರುವ, ದೂರದಲ್ಲಿರುವ ಎಲ್ಲರಲ್ಲೂ, ಎಲ್ಲದರಲ್ಲೂ ಇದ್ದಾನೆ. ಈ ಭಾವನೆ ದೃಢವಾದರೆ, ಪ್ರಾಪಂಚಿಕ ಸ್ವಾರ್ಥದೃಷ್ಟಿ ತಾನಾಗಿ ಹೊರಟು ಹೋಗುತ್ತದೆ. ಪ್ರಾಪಂಚಿಕ ದೃಷ್ಟಿಯ ತ್ಯಾಗವೇ ನಿಜವಾದ ತ್ಯಾಗ. ಆ ತ್ಯಾಗವಿದ್ದಲ್ಲಿ ಇಡೀ ವಿಶ್ವವನ್ನು ಕಣ್ಣು ತುಂಬಾ ನೋಡುತ್ತಾ ಆಸಕ್ತಿ, ಆತಂಕ, ಭಯಗಳಿಲ್ಲದೆ ಆನಂದಿಸಬಹುದು.

"ಶ್ರೀಮಂತರ ಮನೆಯ ದಾಸಿ ಎಲ್ಲಾ ಕೆಲಸಕಾರ್ಯಗಳನ್ನೂ ಮಾಡುತ್ತಾಳೆ. ಆದರೆ ಆಕೆಯ ಮನಸ್ಸು ಮಾತ್ರ ಹಳ್ಳಿಯಲ್ಲಿರುವ ತನ್ನ ಮನೆಯ ಕಡೆಗೇ. ಯಜಮಾನನ ಮನೆಯ ಮಕ್ಕಳನ್ನು ತನ್ನವೆಂದೇ ಬೆಳೆಸುತ್ತಾಳೆ. ಅಷ್ಟೇ ಅಲ್ಲ, 'ನನ್ನ ರಾಮ, ನನ್ನ ಹರಿ' ಎಂಬುದಾಗಿ ಅವರನ್ನು ಕರೆಯುತ್ತಾಳೆ. ಆದರೆ ಅವರು ತನ್ನವರಲ್ಲವೆಂಬುದು ಆಕೆಗೆ ಹೃದಯದಲ್ಲಿ ಚೆನ್ನಾಗಿ ಗೊತ್ತಿದೆ." (ಶ್ರೀರಾಮಕೃಷ್ಣ ವಚನವೇದ ಭಾಗ ೨: ಪು ೭).

ತಾನು ಯಾವುದೇ ಒಂದು ವಸ್ತು ಅಥವಾ ಜೀವಿಯ ಒಡೆಯ ಎಂದು ಭಾವಿಸುವುದೇ ಎಲ್ಲ ದುಃಖಗಳ ಮೂಲ. ಆದ್ದರಿಂದ ಎಲ್ಲಾ ಆಸೆಗಳನ್ನು ತ್ಯಜಿಸಬೇಕು. ಎಲ್ಲವೂ ಭಗವಂತನೇ ಆಗಿರುವುದರಿಂದ ತನ್ನದೆಂಬುದು ಯಾವುದೂ ಇಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ, ನೋಡುವವನು ಮಾತ್ರ ಒಂದು ಚಿತ್ರವನ್ನು ಆನಂದಿಸಬಲ್ಲ. ಅದನ್ನು ಮಾರಾಟ ಮಾಡುವ ವ್ಯಕ್ತಿಯಲ್ಲ. ಇಂತಹ ಒಂದು ದೃಷ್ಟಿಯನ್ನು ಇಟ್ಟುಕೊಂಡು ತನ್ನ ಕರ್ತವ್ಯವನ್ನು ಪ್ರತಿಯೊಬ್ಬನೂ ಮಾಡಬೇಕು. ಸಾಧ್ಯವಾದಷ್ಟೂ ತನ್ನಲ್ಲಿರುವುದನ್ನು ಇತರರಿಗೆ ಹಂಚಬೇಕು. ತನಗೆ ಬೇಕಾದ್ದನ್ನು ನ್ಯಾಯರೀತಿಯಿಂದ ಸಂಪಾದಿಸಬೇಕು. ಅಪಹರಿಸದೆ, ಸ್ವಂತ ಬೆವರಿನಿಂದ ಪಡೆದ ಧನವೇ ನಮಗೆ ಸುಖ ಕೊಡಬಲ್ಲದು. ಈ ನ್ಯಾಯಮಾರ್ಗದ ಸಂಪಾದನೆಯಿಂದ ದೊರೆತ ಧನವನ್ನು ಇತರರಿಗೂ ಹಂಚಬೇಕು. ಕೇವಲ ಧನವಲ್ಲ, ತಿಳಿದಿರುವ ಉದಾತ್ತ

ಭಾವನೆಗಳನ್ನೂ ಹಂಚಿಕೊಳ್ಳಬೇಕು. ನಾವು ಪ್ರೀತಿಸಿದರೆ, ಪ್ರತಿಯಾಗಿ ನಮಗೆ ಪ್ರೀತಿ ಸಿಗುತ್ತದೆ. ವಿದ್ಯೆ ಕೊಟ್ಟರೆ, ಅವರಿಂದ ಜೀವನದ ವಿದ್ಯೆ ಸಿಗುತ್ತದೆ. ಕೊಟ್ಟಷ್ಟೂ ನಮ್ಮ ಆಂತಸ್ಸತ್ತ್ವ ಹೆಚ್ಚುತ್ತಾ ಹೋಗುತ್ತದೆ.

ಶ್ರೀರಾಮಕೃಷ್ಣರ ದೃಷ್ಟಿಯಲ್ಲಿ ಅಂತಿಮ ಸತ್ಯವೇ 'ಬ್ರಹ್ಮವೇ ಎಲ್ಲವೂ'. ಅವನೊಬ್ಬ ಮಾತ್ರ ವಸ್ತು; ಉಳಿದೆಲ್ಲವೂ ಅವಸ್ತು; ಜಗತ್ತು ಅನಿತ್ಯ, ಆತ್ಮ ನಿತ್ಯ; ಜಗತ್ತು ಇಂದ್ರಜಾಲದಂತೆ, ಐಂದ್ರಜಾಲಿಕನೇ ಸತ್ಯ. ಅವನ ಇಂದ್ರಜಾಲ ಅನಿತ್ಯ. ಇಂದ್ರ ಜಾಲವನ್ನು ಬಿಟ್ಟು ಐಂದ್ರಜಾಲಿಕನಲ್ಲೇ ಮನಸ್ಸನ್ನು ಇಡಬೇಕು. ನಮ್ಮ ಮನಸ್ಸಿನ ದೃಷ್ಟಿಯೇ ನಮ್ಮ ದುಃಖಕ್ಕೆ ಕಾರಣ. ನಾನು ಬದ್ಧನಲ್ಲ, ನಾನು ಮುಕ್ತ ಎಂಬ ದೃಷ್ಟಿಯಿಂದ ಮನುಷ್ಯ ಮುಕ್ತನಾಗಬಲ್ಲ. ಎಲ್ಲಾ ವಿಧದ ಸಾಧನೆಗಳಲ್ಲಿ ಸಿದ್ಧಿ ಪಡೆದಿದ್ದ ಶ್ರೀರಾಮಕೃಷ್ಣರು ಈ ಒಂದು ಭಾವದಲ್ಲಿ ತಲ್ಲೀನರಾಗಿರುತ್ತಿದ್ದರು –**"ಜೋ ಕುಛ್ ಹೈ, ಸೋ ತೂ ಹೀ ಹೈ"** (ಯಾವುದು ಇದೆಯೋ ಅದೆಲ್ಲವೂ ನೀನೇ). ಅದಕ್ಕೇ ಅವರು ಭಾವಪರವಶತೆಯಿಂದ ಸರ್ವದಾ ಹಾಡುತ್ತಿದ್ದರು:

**ಈ ಜಗವೆಂಬುದು ಮೋಜಿನ ಮನೆಯೋ!**
**ಇದರೊಳು ನಾ ಮನಬಂದೊಲು ನಡೆವೆ!**
**ತಿನ್ನುವೆ–ಕುಡಿಯುವೆ, ಕುಣಿಯುವೆ–ನಲಿವೆ!**

ತದಂತರಸ್ಯ ಸರ್ವಸ್ಯ :

ಎಲ್ಲ ಚರಾಚರ ವಸ್ತು, ಜೀವಿಗಳಲ್ಲಿ ಪರಮಾತ್ಮ ಇದ್ದಾನೆ ಎಂಬುದು ಸತ್ಯ. ಆದರೆ ಆತನನ್ನು ನೋಡುವ ದೃಷ್ಟಿ ನಮ್ಮ ಅಂತರಂಗದಿಂದಲೇ ಆರಂಭವಾಗಬೇಕು. ಶುಭ್ರನೂ, ಜ್ಯೋತಿ ಸ್ವರೂಪನೂ, ಪರಮಾನಂದಪೂರ್ಣನೂ ಆದ ಭಗವಂತ ನಮ್ಮ ಅಂತರ್ಯದಲ್ಲೇ ಸದಾ ವಿರಾಜಮಾನ ನಾಗಿದ್ದಾನೆ. ಇದೇ ಭಾವನೆಯನ್ನು ಬಸವಣ್ಣನವರು ಎಷ್ಟು ಸೊಗಸಾಗಿ ಈ ವಚನಗಳಲ್ಲಿ ತಂದಿದ್ದಾರೆ: 'ಎನ್ನ ಕಾಲೇ ಕಂಬ, ದೇಹವೇ ದೇಗುಲ'; 'ಕರಿಯು ಕನ್ನಡಿಯೊಳಗಡಗಿದಂತೆ ನೀನೆನ್ನೊಳೊಡಗಿಹೆ ಕೂಡಲಸಂಗಯ್ಯ'.

ಒಂದು ದಿನ ಶ್ರೀರಾಮಕೃಷ್ಣರು ಶಿಷ್ಯರಿಗೆ ಕಲ್ಪತರುವಾಗಿ ಜ್ಞಾನ ಭಕ್ತಿ ಮುಕ್ತಿಗಳನ್ನು ಹಂಚಿದರು. ಬಳಿಯಲ್ಲಿದ್ದ ಶರತ್ (ಮುಂದೆ ಸ್ವಾಮಿ ಶಾರದಾನಂದ) ಏನೂ ಕೇಳಲಿಲ್ಲ. ಆಗ ಶ್ರೀರಾಮಕೃಷ್ಣರು ಕೇಳಿದರು: "ನೀನು ದೇವರನ್ನು ಹೇಗೆ ಸಾಕ್ಷಾತ್ಕರಿಸಿಕೊಳ್ಳಲು ಬಯಸುವೆ? ಧ್ಯಾನದಲ್ಲಿ ಯಾವ ದಿವ್ಯ ದರ್ಶನವನ್ನು ಪಡೆಯಬಯಸುವೆ?" ಅದಕ್ಕೆ ಶರತ್, 'ನಾನು ದೇವರ ಯಾವುದೊಂದು ವಿಶಿಷ್ಟ ರೂಪವನ್ನೂ ಕಾಣಲು ಬಯಸುವುದಿಲ್ಲ. ಎಲ್ಲ ಜೀವಿಗಳಲ್ಲೂ ಅವನನ್ನು ನೋಡಲು ಬಯಸುತ್ತೇನೆ. ನನಗೆ ದಿವ್ಯದರ್ಶನ ಬೇಡ" ಎಂದನು. ಶ್ರೀರಾಮಕೃಷ್ಣರು ನಕ್ಕು "ಅದು ಆಧ್ಯಾತ್ಮಿಕ ಸಾಧನೆಯ ಪರಾಕಾಷ್ಠೆ. ಒಮ್ಮೆಲೇ ಅದನ್ನು ಪಡೆಯುವುದು ಸಾಧ್ಯವಿಲ್ಲ" ಎಂದರು. ( ದೇವರೊಡನೆ ಬಾಳಿದವರು–೧, ಪು.೩೬೭)

ಎಲ್ಲದರಲ್ಲೂ, ಎಲ್ಲರಲ್ಲೂ ದೇವರನ್ನು ಕಾಣಬೇಕಾದರೆ ಮೊದಲು ತನ್ನಲ್ಲಿ ದೇವರನ್ನು ಕಾಣಬೇಕು, ಅಂದರೆ ತನ್ನ ದಿವ್ಯಸ್ವರೂಪದ ಅನುಭವ ಉಂಟಾಗಬೇಕು. ತಾನು ದೇಹ ಮನಸ್ಸುಗಳಿಗೆ ಅತೀತವಾದ ದಿವ್ಯಸ್ವರೂಪ ಎಂಬುದರ ಅರಿವಾಗಬೇಕು. ವ್ಯಕ್ತಿಯ ದೈವೀಕರಣವಾಗದೆ ಜಗತ್ತಿನ ದೈವೀಕರಣ ಅಸಾಧ್ಯ. ಸಾಧಾರಣವಾಗಿ ನಮ್ಮ ಪ್ರಜ್ಞೆಯೆಲ್ಲಾ ನಮ್ಮ ದೇಹದ ಮೇಲೆ, ಮನಸ್ಸಿನ ಪ್ರಾಪಂಚಿಕ ವಾಸನೆಗಳಲ್ಲಿಯೇ ಕೇಂದ್ರೀಕೃತವಾಗಿರುತ್ತದೆ. ಹೆಚ್ಚಿನ ಮಟ್ಟಿಗೆ ಅವುಗಳ ಸಂತುಷ್ಟಿಯಲ್ಲಿಯೇ ನಮ್ಮ ಕಾಲ ಕಳೆದುಹೋಗುತ್ತದೆ. ಜನ್ಮ ಜನ್ಮಾಂತರಗಳ ಸಂಸ್ಕಾರಸಮೂಹ ನಮ್ಮ ಮನಸ್ಸಿನಲ್ಲಿ ಸದಾ ಪುಂಖಾನುಪುಂಖವಾಗಿ ಉದ್ಭವಿಸುತ್ತಾ ಇರುತ್ತದೆ. ಅವುಗಳನ್ನು ತಡೆಗಟ್ಟಿ ಮನಸ್ಸನ್ನು ಭಗವಂತನ ಕಡೆಗೆ ಹರಿಸಬೇಕು. ಎಲ್ಲಾ ಬಹಿರ್ಮುಖ ವೃತ್ತಿಗಳೂ ಅಂತರ್ಮುಖವಾಗಿ ಚೈತನ್ಯವಸ್ತುವಿನ ಮೇಲೆ ಕೇಂದ್ರೀಕೃತವಾಗಬೇಕು.

ಈ ಶರೀರ ನಮಗೆ ಹುಟ್ಟಿನಿಂದ ಬಂದಿದೆ. ಅದು ಬೆಳೆಯುತ್ತಾ ಬದಲಾಗುತ್ತಿದೆ. ಮತ್ತೆ ಅದರ ಕಥೆ ಮುಗಿದೂ ಹೋಗುತ್ತದೆ. ಶರೀರದೊಂದಿಗೆ ಬಂದ ಮನಸ್ಸು ಸದಾ ಓಲಾಡುತ್ತಿದೆ. ಇಂತಹ ಶರೀರ, ಮನಸ್ಸುಗಳ ಹಿಂದೆ ಬದಲಾಗದ, ಓಲಾಡದ, ನಿತ್ಯವೂ, ಸ್ವತಂತ್ರವೂ ಆದ ಚೈತನ್ಯವಿದೆ. ಈ ಚೈತನ್ಯವೇ ನಮ್ಮ ಆತ್ಮ. ಅದಿರುವುದರಿಂದಲೇ ನಮ್ಮ ಶರೀರ ಮನಸ್ಸುಗಳಲ್ಲಿ ನಿತ್ಯತೆಯ, ಸ್ವಾತಂತ್ರ್ಯದ ಒಂದು ಅನುಭವ ಬರುತ್ತದೆ. ಅದರ ಅಸ್ತಿತ್ವದಿಂದಲೇ ನಮ್ಮ ಶರೀರ ಮನಸ್ಸುಗಳು ಬದುಕಿವೆ. ಆ ಆತ್ಮನನ್ನು ನಾವು ತಿಳಿಯಬೇಕು. ಪ್ರಕೃತಿಯ ಆಕರ್ಷಣೆ, ಕೋಪ, ವಿಕೋಪಗಳ ನಡುವೆ, ಅನುಭವಗಳ ರಾಶಿಯನ್ನು ಸಂಗ್ರಹಿಸುತ್ತಾ ಪ್ರತಿಯೊಬ್ಬ ಜೀವಿಯೂ ತನ್ನೊಳಗಿರುವ 'ಈಶನನ್ನು' ಕಾಣಬೇಕು. ಪ್ರತಿಯೊಂದು ಜೀವಿಯ ಉದ್ದೇಶವೂ ಅದೇ. ಪ್ರಕೃತಿಯು ಅದಕ್ಕೆ ಬೇಕಾದ ಸಹಾಯ ಮಾಡುತ್ತಿದೆ. ಇಡೀ ಬ್ರಹ್ಮಾಂಡದ ಸೃಷ್ಟಿ, "ಈಶ ನನ್ನೊಳಗೇ ಇದ್ದಾನೆ ಇತರ ಎಲ್ಲದರಲ್ಲೂ ಇದ್ದಾನೆ" ಎಂಬ ಅನುಭವ ತರುವುದಕ್ಕೆ ಮಾತ್ರವಾಗಿದೆ. ಈಶ ಬೇರೆ ಯಾರೂ ಅಲ್ಲ. ನನ್ನಲ್ಲೇ ತುಂಬಿ ತುಳುಕಾಡುತ್ತಿರುವ ಚೈತನ್ಯ ವಸ್ತು. ನನ್ನಲ್ಲಿರುವ ಜ್ಯೋತಿಯೇ ಬ್ರಹ್ಮಾಂಡವನ್ನು ಬೆಳಗುತ್ತಿದೆ. ನಾನು ಬೇರೆಯಲ್ಲ, ಅವನು ಬೇರೆಯಲ್ಲ; ನಾನೇ ಅವನು, ಅವನೇ ನಾನು. ಇರುವುದೆಲ್ಲ ಅವನೊಬ್ಬನೇ, ಅಥವಾ ನಾನೊಬ್ಬನೇ. ಭಕ್ತ ಎಲ್ಲವೂ ನೀನೇ ಎನ್ನುತ್ತಾನೆ, ಜ್ಞಾನಿ ಎಲ್ಲವೂ ನಾನೇ ಎನ್ನುತ್ತಾನೆ. ಒಟ್ಟಿನಲ್ಲಿ

ಇಡೀ ಬ್ರಹ್ಮಾಂಡವು ಈಶನಿಂದ ಓತಪ್ರೋತವಾಗಿದೆ. **ಯೋऽಸಾವಸೌ ಪುರುಷಃ ಸೋऽಹಮಸ್ಮಿ** – ಬ್ರಹ್ಮಾಂಡದಲ್ಲಿರುವ ಪ್ರಖರವಾದ ಪುರುಷನೇ ನನ್ನಲ್ಲೂ ಇರುವುದರಿಂದ ನಾನೇ ಆತನಾಗಿದ್ದೇನೆ (ಈಶ. ೧೫).

**ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ:** *ಸತ್ಯದ ಮುಖವು ಬಂಗಾರದ ಮುಸುಕಿನಿಂದ ಮುಚ್ಚಲ್ಪಟ್ಟಿದೆ.*

ನಮ್ಮ ಸುತ್ತ ಮುತ್ತ, ಅಕ್ಕಪಕ್ಕದಲ್ಲಿ ನೋಡುತ್ತಿರುವ, ಕಾಣುತ್ತಿರುವ ಈ ಜಗತ್ತು ಇಂದ್ರಿಯಸುಖವನ್ನು ಜ್ಞಾಪಿಸುತ್ತಿದೆಯೇ ಹೊರತು, ಅತೀಂದ್ರಿಯನಾದ ಆತ್ಮನ ಬಗ್ಗೆ ಯಾವ ಸುಳಿವನ್ನೂ ಕೊಡುವುದಿಲ್ಲ. ಇದೊಂದು ಶಾಲೆಯಂತೆ. ಪ್ರತಿವರ್ಷವೂ ಕೆಲವು ವಿದ್ಯಾರ್ಥಿಗಳು ಮುಂದೆ ಓದುವುದಕ್ಕೆ ಬೇರೆ ಶಾಲೆಗೆ ಹೋಗುವರು ಮತ್ತು ಬೇರೆ ಕಡೆಯಿಂದ ಇಲ್ಲಿಗೆ ಹೊಸ ಹುಡುಗರು ಬರುವರು. ಹುಡುಗರು ಹೋಗುತ್ತಾರೆ, ಹುಡುಗರು ಬರುತ್ತಾರೆ, ಶಾಲೆ ಮಾತ್ರ ಹಾಗೇ ಇರುತ್ತದೆ. ಇಂತಹ ಶಾಲೆಯನ್ನು ಪ್ರತಿನಿತ್ಯ ನೋಡುತ್ತಾ ನೋಡುತ್ತಾ ಇದೇ ಸತ್ಯವೆನಿಸುತ್ತದೆ. ಸಾಮಾನ್ಯ ಅಥವಾ ವ್ಯಾವಹಾರಿಕ ದೃಷ್ಟಿಯಲ್ಲಿ ಈ ಜಗತ್ತೇ ಸತ್ಯ. ಇಲ್ಲಿನ ಕಾರ್ಯಕಲಾಪಗಳು ಕಾಣುತ್ತಿರುವಂತೆಯೇ ಸತ್ಯ. ಇದರ ಹಿಂದೆ ಬೇರೆ ಯಾವುದೂ ಇಲ್ಲ ಎಂಬುದೇ ನಿತ್ಯ ಅನುಭವ. ದಿನದಿನದ ಬದುಕಿನಲ್ಲಿ ಮತ್ತೆ ಮತ್ತೆ ಪೆಟ್ಟು ಬೀಳುತ್ತಿದ್ದರೂ ಮಾನವನಲ್ಲಿ ವಿವೇಕ ಸಹಜವಾಗಿ ಮೂಡುವುದಿಲ್ಲ. ಆತ ಬಹಳಷ್ಟು ನೊಂದ ಮೇಲೆ ಜೀವನವೆಂಬ ಶಾಲೆಯಲ್ಲಿ ಪಾಠ ಕಲಿತ ಮೇಲೆ, ಮಹಾತ್ಮರ ವಾಣಿಯನ್ನು ನೆನೆಸಿಕೊಳ್ಳುತ್ತಾ ಭಗವಂತನಲ್ಲಿ ಮೊರೆಯಿಡುತ್ತಾನೆ.

**ಹಿರಣ್ಮಯೇನ ಪಾತ್ರೇಣ** – ಚಿನ್ನದ ಪಾತ್ರೆ ಅಂದರೆ ಮಾಯೆ. ಬಂಗಾರ ಹೇಗೆ ಹೊಳೆಯುತ್ತಾ ಆಕರ್ಷಿಸುವುದೋ ಅದೇ ರೀತಿ ಈ ಪ್ರಪಂಚ ನಮ್ಮನ್ನು ಆಕರ್ಷಿಸುತ್ತಿದೆ. "ಕಾಮ ಕಾಂಚನ, ಪ್ರಪಂಚವನ್ನೆಲ್ಲ ಪಾಪದಲ್ಲಿ ಮುಳುಗಿಸಿದೆ. ಕಾಮಿನಿಯನ್ನು ಜಗನ್ಮಯಿಯ ಆವಿರ್ಭಾವವೆಂದು ನೋಡಿದಾಗ ಅವಳು ನಿರಾಯುಧೆಯಾಗುವಳು. ಕಾಮಕಾಂಚನಗಳಲ್ಲಿ ಜೀವಿಗೆ ಆಸೆ, ಆನಂದ ಇರುವತನಕ ದೇವರನ್ನು ನೋಡಲಾರ" (ಶ್ರೀರಾಮಕೃಷ್ಣ ಉಪದೇಶಾಮೃತ, ಪು.೨೦).

ಝುಗಝುಗಿಸುವ ಕಾಮಕಾಂಚನದ ಹೊಳಪು ಜಗತ್ತಿನ ಹಿನ್ನೆಲೆಯಲ್ಲಿರುವ ಸತ್ಯವಾದ ಆನಂದ-ಚೈತನ್ಯವನ್ನು ಆವರಿಸಿದೆ. ಆ ಹೊಳಪಿನ ಆಕರ್ಷಣೆ ಎಷ್ಟು ಅಂದರೆ ಅದರ ಹಿಂದೆ ಇರುವ ಸತ್ಯದ ಬಗ್ಗೆ ತಿಳಿಯಪಡಿಸಿದರೂ ಅರಿವಿಗೆ ಬರುವುದಿಲ್ಲ. ಕ್ಷಣಕಾಲಕ್ಕೆ ತನ್ಮಯಗೊಳಿಸುವ ಶಬ್ದ, ರೂಪ, ರಸ, ಗಂಧ, ಸ್ಪರ್ಶಗಳಿಗೆ ಮಾರುಹೋಗುತ್ತಾನೆ ಮನುಷ್ಯ. ಇದರ ಬಗ್ಗೆ ಶ್ರೀರಾಮಕೃಷ್ಣರು ಕೊಟ್ಟ ಉದಾಹರಣೆ ಹೀಗಿದೆ: "ಧಾನ್ಯದ ಮೂಟೆ ಇಟ್ಟಿರುವ ಕೋಣೆಗೆ ಹೆಗ್ಗಣಗಳು ಬರದೆ ಇರಲಿ ಎಂದು ವ್ಯಾಪಾರಿ ಅವು ಬರುವ ದಾರಿಯಲ್ಲಿ ಸ್ವಲ್ಪ ಪುರಿಯನ್ನು ಎರಚುವನು. ಅದನ್ನು ತಿಂದು ಅವು ಹೊರಟು ಹೋಗುತ್ತವೆ. ಮೂಟೆಗಳಿರುವ ಕೋಣೆಗೆ ಬರುವ ಆವಶ್ಯಕತೆ ಅವಕ್ಕೆ ಕಾಣುವುದಿಲ್ಲ." ಇದೇ ರೀತಿ ಜಗತ್ತಿನಲ್ಲಿ ಮೋಹಕ ವಸ್ತುಗಳು ಸುಲಭವಾಗಿ ಲಭ್ಯವಾಗಿವೆ. ಮಾನವನಿಗೆ ಅವುಗಳ ತಾತ್ಕಾಲಿಕ ರುಚಿಯಲ್ಲೇ ಮಗ್ನನಾಗುವ ಇಚ್ಛೆ. ಆದರೆ ಈ ಮಿಥ್ಯಾ ವಸ್ತುಗಳು ತಮ್ಮ ಕರಾಳ ರೂಪವನ್ನು ತೋರಿಸಿದಾಗ ಮನುಷ್ಯ ತತ್ತರಿಸುತ್ತಾನೆ.

**ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ** – *ನಿನ್ನ ಒಳಿತನ್ನು ಉಂಟುಮಾಡುವ ರೂಪವನ್ನು ನೋಡುವೆ.*

ಸೂರ್ಯನು ಪ್ರಖರವಾದ ರಶ್ಮಿಯಿಂದ ಕೂಡಿದ್ದರೆ ಅವನನ್ನು ನೋಡುವುದಕ್ಕೆ ಆಗುವುದಿಲ್ಲ. ಕಣ್ಣು ಕುಕ್ಕಿ ಅಂಧನಾಗುವ ಭಯವಿದೆ. ಮಧ್ಯಾಹ್ನದ ಪ್ರಚಂಡ ತಾಪದಲ್ಲಿ ಸೂರ್ಯ ಅತ್ಯಂತ ಭೀಕರವಾಗಿರುತ್ತಾನೆ. ತನ್ನ ಸುಡುವ ಶಕ್ತಿಯನ್ನು ಪ್ರಕಟಗೊಳಿಸುತ್ತಾನೆ. ಆದರೆ ಅದೇ ಸೂರ್ಯ ಉದಯ ಮತ್ತು ಅಸ್ತಮಾನ ಸಮಯಗಳಲ್ಲಿ ಸೌಮ್ಯವಾಗಿರುತ್ತಾನೆ. ಅಲ್ಲಿ ತೀವ್ರತೆಯ ತಾಪವಿಲ್ಲ. ಅದರಂತೆ ಶಬ್ದ, ರೂಪ, ಸ್ಪರ್ಶಾದಿಗಳ ಸಂಪರ್ಕವಿಲ್ಲದ ಇಂದ್ರಿಯಾತೀತವಾದ ಈಶನನ್ನು ನೋಡಲು ವೈರಾಗ್ಯಪೂರ್ಣ ವ್ಯಕ್ತಿ ಭಕ್ತನಾಗಿ ಹಂಬಲಿಸುತ್ತಾನೆ. ಶ್ರೀರಾಮಕೃಷ್ಣರು ಹೇಳುವಂತೆ ರಾತ್ರಿಯಲ್ಲಿ ಸಾರ್ಜೆಂಟ್ ಸಾಹೇಬ ಉಜ್ವಲ ದೀಪವನ್ನು ಹಿಡಿದು ಎಲ್ಲರನ್ನೂ ನೋಡಬಲ್ಲ. ಆದರೆ ಆತನನ್ನು ಯಾರೂ ನೋಡಲಾರರು. ಆತನನ್ನು ನೋಡಬೇಕಾದರೆ ಆತನಲ್ಲಿ ಪ್ರಾರ್ಥಿಸಿಕೊಳ್ಳಬೇಕು, "ದಯವಿಟ್ಟು ದೀಪವನ್ನು ನಿನ್ನ ಮುಖದ ಕಡೆಗೆ ತಿರುಗಿಸಿಕೋ. ನಾನು ನಿನ್ನನ್ನು ನೋಡಲು ಇಚ್ಛಿಸುತ್ತೇನೆ." ಆತ ಮನಸ್ಸು ಮಾಡಿ, ಕೃಪೆದೋರಿ, ತನ್ನ ಕಡೆ ತಿರುಗಿಸಿಕೊಂಡರೆ ಮಾತ್ರ ಆತನನ್ನು ನೋಡಬಹುದು.

ತನ್ನ ಕೋರೈಸುವ ಕಾಂತಿಯನ್ನು ಕಡಮೆ ಮಾಡಿದಾಗ ಮಾತ್ರ ಭಗವಂತನ ಕಲ್ಯಾಣತಮ, ಸೌಮ್ಯ ಮತ್ತು ಆನಂದದಾಯಕ ಮೂರ್ತಿ ನಮಗೆ ಕಾಣುವುದು. ಆ ಮನಮೋಹಕ ರೂಪದ ದರ್ಶನದೊಂದಿಗೆ ನಮ್ಮ ಅಜ್ಞಾನ, ದುಃಖ ನಾಶವಾಗಿ ಶಾಶ್ವತ ಆನಂದ ಉಂಟಾಗುವುದು. ಅಜ್ಞಾನವು ತೊಲಗಿದಾಗ ಅಖಿಲ ವಿಶ್ವವೇ ಬ್ರಹ್ಮವಾಗಿ ತೋರುವುದು. ಇದು ಕೇವಲ ಬೌದ್ಧಿಕ ಅನುಭವವಲ್ಲ, ನಿಜವಾದ ಸತ್ಯದ ಅನುಭೂತಿಯದು. ಶ್ರೀರಾಮಕೃಷ್ಣರು ಹೇಳುತ್ತಿದ್ದ ಮಾತಿದು. "ಕೆಲವರು ಹಾಲಿನ ಬಗ್ಗೆ ಕೇಳಿದ್ದಾರೆ. ಕೆಲವರು ಹಾಲನ್ನು

ನೋಡಿದ್ದಾರೆ. ಇನ್ನು ಕೆಲವರು ಹಾಲನ್ನು ಕುಡಿದು ಹೃಷ್ಟಪುಷ್ಟ ರಾಗಿದ್ದಾರೆ. ಯಾರು ಹಾಲನ್ನು ಕುಡಿದಿರುವರೋ ಅವರು ಮಾತ್ರ ಹಾಲು ಹೇಗಿವೆ ಎಂದು ಹೇಳಬಲ್ಲರು." ಆತ್ಮದ ನಿಜವಾದ ಅನುಭವ ದೇಹ ಮತ್ತು ಮನಸ್ಸಿನ ಬೋಧೆಯನ್ನು ನಾಶ ಮಾಡುತ್ತದೆ. "ದೇಹ ನಾನಲ್ಲ, ಮನಸ್ಸು ನಾನಲ್ಲ, ಅಮರ ಆತ್ಮ ನಾನು" ಎಂಬ ಅನುಭವ ಉಂಟಾದಾಗ ದೇಹಕ್ಕೆ ಅಥವಾ ಮನಸ್ಸಿಗೆ ಬರುವ ಮೋಹವಾಗಲೀ, ಶೋಕ ವಾಗಲೀ ಇರುವುದಕ್ಕೆ ಸಾಧ್ಯವಿಲ್ಲ.

**ತತ್ರ ಕೋ ಮೋಹಃ ಕಶ್ಶೋಕ ಏಕತ್ವಮನುಪಶ್ಯತಃ** – *ಏಂದೇ ಚೈತನ್ಯವನ್ನು ಎಲ್ಲೆಡೆ ಅನುಭವಿಸುವವನಿಗೆ ಮೋಹ ವೆಲ್ಲಿ? ಶೋಕವೆಲ್ಲಿ? (ಈಶಾ. ೭)*

ನೈಜ ಸ್ಥಿತಿಯ ದೃಷ್ಟಿಯಿಲ್ಲದಿರುವುದೇ ಮೋಹ. ಇದ್ದದ್ದನ್ನು ಇದ್ದ ಹಾಗೆ ನೋಡುವುದೇ ನಿರ್ಮೋಹ. ತಾತ್ಕಾಲಿಕ ವಸ್ತು ಗಳಲ್ಲೆಲ್ಲಾ ಶಾಶ್ವತವಾದ ವಸ್ತುವನ್ನು ನೋಡುವುದೇ ನಿರ್ಮೋಹ. ಮೋಹವಿದ್ದರೆ ಶೋಕ ಬರುವುದು. ಆದರೆ ಏಕತ್ವದ ದೃಷ್ಟಿ ಉಂಟಾದರೆ ಮೋಹವೆಲ್ಲಾ ನಾಶವಾಗುವುದು. ಅಭಿಪ್ರಾಯವಾದ ಮೋಹವೇ ನಾಶವಾದಾಗ ಶೋಕಕ್ಕೆ ಇನ್ನು ಜಾಗವೆಲ್ಲಿ? ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಿದ್ದರು. "ಒಬ್ಬ ಊರ ಹೊರಗೆ ಹೋಗಿ ಭೂತದ ವೇಷ ಹಾಕಿಕೊಂಡು ಅನಂತರ ಊರಿನ ಒಳಗೆ ಬಂದು ಮಕ್ಕಳನ್ನು ಅಂಜಿಸುತ್ತಿದ್ದ. ಒಬ್ಬ ಹುಡುಗ ಇವನು ವೇಷ ಹಾಕಿಕೊಳ್ಳುತ್ತಿರುವುದನ್ನು ನೋಡಿದ್ದ. ವೇಷಧಾರಿ ಇವನ ಬಳಿಗೆ ಬಂದು ಅಂಜಿಸಿದ. ಆದರೆ ಈ ಹುಡುಗ ಅಂಜ ಲಿಲ್ಲ. 'ನೀನು ಯಾರು ಎಂಬುದು ನನಗೆ ಗೊತ್ತು' ಎಂದ". ಆದರಂತೆ ಜ್ಞಾನಿ ಕೂಡ ಜಗತ್ತಿನ ಮುಖವಾಡದ ಹಿಂದೆ ಇರುವ ಪರಮಾತ್ಮನನ್ನೇ ನೋಡಬಲ್ಲ; ಅವನು ಯಾವುದಕ್ಕೂ ಅಂಜುವುದಿಲ್ಲ.

**ಯೇ ಕೇ ಚಾತ್ಮಹನೋ ಜನಾಃ** : *ತಮ್ಮನ್ನೇ ಕೊಂದು ಕೊಳ್ಳುವ ಜನರು ಕೆಲವರು.*

ಈ ದೇಹಕ್ಕೆ ಮಹತ್ತ್ವವಿದೆ ಎಂದು ಗೊತ್ತಿದ್ದೂ ಮರೆಯು ತ್ತೇವೆ. ಇಂತಹ ದೇಗುಲ ಸುಲಭವಾಗಿ ಬಂದದ್ದಲ್ಲ. ಜನ್ಮಜನ್ಮಾಂತರದ ಸುಕೃತದ ಫಲವಿದು. ಆದ್ದರಿಂದ ಈ ಶರೀರವು ಅತಿ ದುರ್ಲಭ, ಅತಿ ಪವಿತ್ರ, ಅತಿ ಶ್ರೇಷ್ಠ. ಭಾಗ್ಯ ವಂತ ಜೀವಿಗಳು ಮಾತ್ರ ಬುದ್ಧಿ, ವಿವೇಚನೆಗಳ ಸಾಮರ್ಥ್ಯ ವುಳ್ಳ ಈ ಮಾನವ ದೇಹವನ್ನು ಪಡೆಯುತ್ತವೆ. ಇದರ ಮೂಲಕ ಈಶನನ್ನು ಕಾಣಬಹುದು. ಸ್ವರ್ಗದ ದೇವತೆ ಗಳಿಗಾಗಲಿ, ನರಕದ ಪಾಪಿಗಳಿಗಾಗಲಿ, ದೈವಸಾಕ್ಷಾತ್ಕಾರ ಸಾಧ್ಯವಿಲ್ಲ. ಅವೆಲ್ಲಾ ಭೋಗ ಶರೀರಗಳು. ಈ ಪೃಥ್ವಿ ಕರ್ಮ ಭೂಮಿ. ಇಲ್ಲಿನ ಮಾನವ ತನ್ನ ಕರ್ಮದಿಂದ ತನ್ನನ್ನು ತಾನು ಉದ್ಧರಿಸಿಕೊಳ್ಳಬಲ್ಲ. ಆತ್ಮದರ್ಶನದ ಉಜ್ವಲ ಬೆಳಕಿಲ್ಲದಿದ್ದಲ್ಲಿ ಯಾವ ಲೋಕದಲ್ಲಿದ್ದರೇನಂತೆ, ಎಲ್ಲವೂ ಕತ್ತಲೋ ಕತ್ತಲು. ಮನಸ್ಸು ಮತ್ತು ಇಂದ್ರಿಯಗಳು ಎಷ್ಟೇ ಸುಖದಲ್ಲಿರಲಿ ಅದೆಲ್ಲವೂ ದಟ್ಟವಾದ ಅಂಧಕಾರವೇ. ಮಾನವಶರೀರದಲ್ಲಿ ಮಾತ್ರ ಈ ತಮವನ್ನು ಹೋಗಲಾಡಿಸ ಬಹುದು. ಪುಣ್ಯಮಯವಾದ ಈ ಬದುಕನ್ನು ಕೇವಲ ತುಚ್ಛವಾದ ವಿಲಾಸಕ್ಕಾಗಲೀ, ವಿನೋದದಲ್ಲಾಗಲೀ ಬಳಸಿದರೆ ಆತ್ಮನನ್ನು ಹತ್ಯೆ ಮಾಡಿದಂತೆಯೇ. ಆತ್ಮನಿಗೇನೂ ಮೃತ್ಯುವಿಲ್ಲ. ಆದರೆ ಆತ್ಮೇತರ ವಿಷಯಗಳಲ್ಲಿ ಮುಳುಗಿದ್ದರೆ ಸುಪ್ತ ಚೈತನ್ಯದ ಜ್ಯೋತಿಪ್ರಕಾಶ ಸಾಧ್ಯವಿಲ್ಲ. ಆತ್ಮಸೂರ್ಯನನ್ನು ಇಂದ್ರಿಯಾಕರ್ಷಣೆಯ ಮೋಡ ಆವರಿಸಿದೆ. ಆ ಮೋಡ ವನ್ನು ಸರಿಸುವ ಪ್ರಯತ್ನ ಮಾಡದಿದ್ದರೆ ಆತ್ಮಸೂರ್ಯನನ್ನು ಸಾಕ್ಷಾತ್ಕರಿಸಿಕೊಳ್ಳುವ ಆಸೆ ಬಿಟ್ಟಂತೆ. ಅಂದರೆ ಆತ್ಮನ ಹತ್ಯೆ ಮಾಡಿದಂತೆ. ದೇವರನ್ನು ನೋಡದಿದ್ದಲ್ಲಿ ಆತ್ಮಹನನ ವಾಗುವುದೆಂದು, ಜೀವಿಸಿ ಪ್ರಯೋಜನವಿಲ್ಲವೆಂದು ಶ್ರೀರಾಮ ಕೃಷ್ಣರು ದೇಹವನ್ನೇ ಬಿಡಲು, ಅರ್ಪಿಸಿಕೊಳ್ಳಲು ಪ್ರಯತ್ನಿಸಿ ದ್ದರು. ಅವರಿಗಿದ್ದಂಥ ವ್ಯಾಕುಲತೆ ಇದ್ದಲ್ಲಿ ಎಲ್ಲರ ಬದುಕೂ ಈಶಮಯವಾಗುತ್ತದೆ. *

## ಆಶ್ರಮದ ಕಾರ್ಯಕ್ರಮಗಳು

### ಅಕ್ಟೋಬರ್ ೨೦೦೫

| | | |
|---|---|---|
| ಸ್ವಾಮಿ ಅಖಂಡಾನಂದ ಜಯಂತಿ | ೦೩ | ಸೋಮವಾರ |
| ಶ್ರೀದುರ್ಗಾಪೂಜಾ ಮಹಾಸಪ್ತಮಿ | ೧೦ | ಸೋಮವಾರ |
| ಶ್ರೀದುರ್ಗಾಪೂಜಾ ಮಹಾಷ್ಟಮಿ | ೧೧ | ಮಂಗಳವಾರ |
| ಶ್ರೀದುರ್ಗಾಪೂಜಾ ಮಹಾನವಮಿ | ೧೨ | ಬುಧವಾರ |
| ವಿಜಯದಶಮಿ/ ಮಧ್ವಜಯಂತಿ | ೧೩ | ಗುರುವಾರ |
| ಏಕಾದಶಿ | ೧೪ | ಶುಕ್ರವಾರ |
| ಏಕಾದಶಿ | ೨೮ | ಶುಕ್ರವಾರ |

ಆಶ್ರಮದ ಸಭಾಂಗಣದಲ್ಲಿ ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲೀಷಿ ನಲ್ಲಿಯೂ ಸಂಜೆ ೬ರಿಂದ ೭ರವರೆಗೆ ಪ್ರವಚನಗಳು ನಡೆಯುತ್ತವೆ.